ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು ದಕ್ಷಿಣ ವಿಭಾಗ

ಸಂಖ್ಯೆ:- ಕಾ.ಪಾ.ಅ/.ಬೆಂ.ದ.ವಿ/ಪಿ.ಆರ್/09 /2013-14 ಕಾರ್ಯಪಾಲಕ ಅಭಿಯಂತರರ ಕಛೇರಿ,
ಬೆಂಗಳೂರು ದಕ್ಷಿಣ ವಿಭಾಗ,
ಅಮೃತ್ ನಗರ ಮುಖ್ಯರಸ್ತೆ,
ಸೌದಾಮಿನಿ ಬಡಾವಣೆ,
ಬೆಂಗಳೂರು, ದಿನಾಂಕ: 29.09.2013

ಇವರಿಗೆ,

Sri T Vajrappa
#133, Soumya Nilaya,
Lilakkamma Temple Street,
Thaghapura,
Kanakapura Main road,
Bangalore – 560 052.

ಸರಬರಾಜು ಆದೇಶ ಪತ್ರ

ವಿಷಯ:- **ವಾರ್ಡ್ ಸಂಖ್ಯೆ: 194 (ಗೊಟ್ಟಿಗೇರೆ)** ಯಲ್ಲಿ ಘನತ್ಯಾಜ್ಯ ವಿಲೇವಾರಿ ಮತ್ತು ಸ್ವಚ್ಚತಾ ಕೆಲಸಕ್ಕೆ ಅಗತ್ಯತೆಯಂತೆ, ವಾಹನ, ಸಲಕರಣೆ ಮತ್ತು ಪೌರಕಾರ್ಮಿಕರನ್ನು ಗುತ್ತಿಗೆ ಆಧಾರದ ಮೇಲೆ ಸರಬರಾಜು ಮಾಡಿ, ನಿಯೋಜಿಸುವ ಬಗ್ಗೆ.

ಉಲ್ಲೇಖ:-1. ಮಾನ್ಯ ಉಚ್ಚನ್ಯಾಯಾಲಯದ W.P.No.24739-24740/(PIL) ರ ಮದ್ಯಂತರ ಆದೇಶ ದಿನಾಂಕ: 30.08.2013 ರಂತೆ.
2. ಮಾನ್ಯ ಆಯುಕ್ತರು ದಿನಾಂಕ 21.09.2013 ರಂದು ನಡೆಸಿದ ಸಭೆಯ ನಿರ್ಣಯ.
3. ಮಾನ್ಯ ಜಂಟಿ ಆಯುಕ್ತರು, (ಬೊಂ) ರವರು ಹೊರಡಿಸಿರುವ ದಿ: 23.09.2013ರ ಆದೇಶ ಪತ್ರ.
4. ಅಲ್ಪಾವಧಿ ಕೋಟೇಷನ್ ಪ್ರಕಟಣೆ ಸಂಖ್ಯೆ: ಕಾ.ಪಾ.ಅ/ಬೊ.ವಿ/ಪಿ.ಆರ್/19/2013-14, ದಿ:3.09.2013.
5. ದಿನಾಂಕ:28.09.2013 ರಂದು ಮಾನ್ಯ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರು **Unit** ದರಗಳ ಕೋಟೇಷನ್‌ಗೆ ನೀಡಿರುವ ಅನುಮೋದನೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್ ಸಂಖ್ಯೆ: **194-ಗೊಟ್ಟಿಗೇರೆಯಲ್ಲಿ** ಘನತ್ಯಾಜ್ಯ ವಿಲೇವಾರಿ ಮತ್ತು ಸ್ವಚ್ಚತಾ ಕೆಲಸವನ್ನು ಇಲಾಖಾ ವತಿಯಿಂದ ಕೈಗೊಳ್ಳಲು ಉದ್ದೇಶಿಸಿರುವಂತೆ, ಸದರಿ ಕೆಲಸಕ್ಕೆ ಅಗತ್ಯತೆಗೆ ಅನುಗುಣವಾಗಿ ಬೇಕಿರುವ ವಾಹನ, ಸಲಕರಣೆ ಮತ್ತು ಪೌರಕಾರ್ಮಿಕರನ್ನು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಕೋಟೇಷನ್‌ಗಳನ್ನು ಅಹ್ವಾನಿಸಲಾಗಿದ್ದು, ಸದರಿ ಕೋಟೇಷನ್‌ನಲ್ಲಿ ತಾವು ಭಾಗವಹಿಸಿ, ನೀಡಿರುವ ಕನಿಷ್ಠ Unit ದರದ ಕೋಟೇಷನ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ.

ಅದರಂತೆ, ಈ ಆದೇಶ ಪತ್ರದೊಂದಿಗೆ ಲಗತ್ತಿಸಿರುವ **Shedule –B** ರಲ್ಲಿ ವಿವರಿಸಿರುವಂತೆ, ಪ್ರತಿ ದಿನಕ್ಕೆ ಅಗತ್ಯವಿರುವ, ವಾಹನ, ಸಲಕರಣೆ ಮತ್ತು ಪೌರಕಾರ್ಮಿಕರನ್ನು ಸದರಿ ವಾರ್ಡ್‌ನ ಘನತ್ಯಾಜ್ಯ ವಿಲೇವಾರಿ ಮತ್ತು ಸ್ವಚ್ಚತಾ ಕೆಲಸಕ್ಕೆ ದಿನಾಂಕ: **01.10.2013** ರಿಂದ ಜಾರಿಗೆ ಬರುವಂತೆ, ಸರಬರಾಜು ಮಾಡಲು ಹಾಗೂ ಮುಂದಿನ ಆದೇಶದವರೆವಿಗೂ ನಿಯೋಜಿಸಲು ಸೂಚಿಸಲಾಗಿದೆ.

29/9/13

ಕಾರ್ಯಪಾಲಕ ಅಭಿಯಂತರರು
ಬೆಂಗಳೂರು ದಕ್ಷಿಣ ವಿಭಾಗ

Received
ಟಿ. ವಜ್ರಪ್ಪ

ಷರತ್ತುಗಳು:-

1. ಸರಬರಾಜು ಆದೇಶ ತಲುಪಿದ ಒಂದು ವಾರದೊಳಗಾಗಿ ಕಾರ್ಮಿಕರ ಪರವಾನಗಿ ಮತ್ತು ಇ.ಎಸ್.ಐ, ಪಿ.ಎಫ್. ಹಾಗೂ ವಾಹನಗಳ ನೊಂದಾಯಿತ ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸುವುದು. ಹಾಗು ಪ್ರತಿ ಮಾಹೆ ಇ.ಎಸ್.ಐ ಮತ್ತು ಪಿ.ಎಫ್ ಪಾವತಿಸಿ ದಾಖಲಾತಿ ಒದಗಿಸುವುದು.
2. ಸರಬರಾಜುಗೊಳಿಸಿ, ನಿಯೋಜಿಸಿರುವ ಪೌರಕಾರ್ಮಿಕರಿಗೆ ಅಗತ್ಯವಿರುವ ಸಲಕರಣೆಗಳನ್ನು ಒದಗಿಸುವುದು.
3. ವಾಹನ ಚಾಲಕರು ಬಾರಿ ವಾಹನ ಚಾಲನೆಯ ಪರವಾನಗಿ ಕಡ್ಡಾಯವಾಗಿ ಹೊಂದಿರತಕ್ಕದ್ದು.
4. ಸರಬರಾಜು ಮಾಡಿ ನಿಯೋಜಿಸಿರುವ ಪೌರಕಾರ್ಮಿಕರನ್ನು ಯಾವುದೇ ಕಾರಣಕ್ಕೂ ಬಿ.ಬಿ.ಎಂ.ಪಿ ಖಾಯಂ ನೌಕರರೆಂದು ಪರಿಗಣಿಸತಕ್ಕದಲ್ಲ.
5. ಸರಬರಾಜು ಮಾಡಿ ನಿಯೋಜಿಸಿರುವ ವಾಹನಗಳು ಉತ್ತಮ ಸ್ಥಿತಿಯಲ್ಲಿರಬೇಕು ಹಾಗೂ ಎಲ್ಲಾ ದಾಖಲಾತಿಗಳೊಂದಿಗೆ, ಆ.ಟಿ.ಓ ನಿಯಮಗಳಿಗೆ ಬದ್ಧವಾಗಿದ್ದು, ಇದರ ನಿರ್ವಹಣೆಯ ಜವಾಬ್ದಾರಿ ನಿಮ್ಮದೇ ಆಗಿರುತ್ತದೆ.
6. ಘನತ್ಯಾಜ್ಯ ಮೂಲದಲ್ಲೇ, ಹಸಿಕಸ ಮತ್ತು ಒಣಕಸವನ್ನು ಬೇರ್ಪಡಿಸಿ, ವಿಲೇವಾರಿ ಮಾಡತಕ್ಕದ್ದು.
7. ಒಣತ್ಯಾಜ್ಯವನ್ನು ಒಣತ್ಯಾಜ್ಯ ಘಟಕಕ್ಕೆ ಖಡ್ಡಾಯವಾಗಿ ನೀಡತಕ್ಕದ್ದು.
8. ಸದರಿ ವಾರ್ಡ್‌ನ ಸಹಾಯಕ ಅಭಿಯಂತರರು, ಮತ್ತು ಆರೋಗ್ಯ ಪರಿವೀಕ್ಷಕರು, ನೀಡುವ ನಿರ್ದೇಶನಗಳಂತೆ, ಕಾರ್ಯನಿರ್ವಹಿಸುವುದು.

29/9/13

ಕಾರ್ಯಪಾಲಕ ಅಭಿಯಂತರರು
ಬೆಂಗಳೂರು ದಕ್ಷಿಣ ವಿಭಾಗ

ಪ್ರತಿಯನ್ನು:-

1. ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಆಪ್ತ ಕಾರ್ಯಾಲಕ್ಕೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಸಹಾಯಕ ನಿಯಂತ್ರಕರು (ಹಣಕಾಸು) ಬೊಮ್ಮನಹಳ್ಳಿ ವಲಯ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, **ಅಂಜನಾಪುರ** ಉಪ-ವಿಭಾಗ ರವರಿಗೆ ಕಳುಹಿಸುತ್ತಾ, ದಿನಾಂಕ: 01.10.2013 ರಿಂದ ಇಲಾಖಾವತಿಯಿಂದ ಘನತ್ಯಾಜ್ಯ ನಿರ್ವಹಣೆ / ವಿಲೇವಾರಿಯನ್ನು ನಿರ್ವಹಿಸಲು ಸೂಕ್ತ ಕ್ರಮವಹಿಸುವುದು.
5. ಕಛೇರಿ ಪ್ರತಿ.